ಮುಂಜಾವು
ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್
ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ | ಕೊಪ್ಪ ೧೯–೯–೮೨ ಭಾನುವಾರ | ಸಂಚಿಕೆ ೬ | ಬೆಲೆ ೪೦ ಪೈಸೆ

ಸ್ವಾರ್ಥಿ ಪುಡಾರಿಗಳ ದುಷ್ಟ ಪ್ರಭಾವಕ್ಕೆ ಜಗ್ಗದ ಅಪರೂಪದ ಪೋಲೀಸ್ ಅಧಿಕಾರಿ

(ವಿಶೇಷ ವರದಿ: ಮಾ.ಶೇ. ಗಣಪತಿ)

ನರಸಿಂಹರಾಜಪುರ: ದೇಶೋದ್ಧಾರ, ಬಡ ಜನತೆಯ ಉದ್ಧಾರ ಮಾಡುವುದೇ ನಮ್ಮ ಗುರಿಯೆಂದು ವೇದಿಕೆಯ ಮೇಲೆ ಭಾಷಣ ಬಿಗಿಯುವ ನಮ್ಮ ಪುಡಿ ರಾಜಕಾರಣಿಗಳು ಸ್ವಾರ್ಥ ಸಾಧನೆಯನ್ನೇ ತಮ್ಮ ಗುರಿಯಾಗಿಟ್ಟುಕೊಂಡಿರುತ್ತಾರೆಂಬುದಕ್ಕೆ ಸ್ಪಷ್ಟ ಉದಾಹರಣೆಯೊಂದು ಇಲ್ಲಿದೆ.

ಇಲ್ಲಿನ ಪ್ರಭಾವೀ ರಾಜಕಾರಣಿಗಳೆನಿಸಿಕೊಂಡ ಶ್ರೀಮಂತರೊಬ್ಬರ ಮನೆಯಲ್ಲಿ ಕೃಷ್ಣಮೂರ್ತಿ ಎಂಬ ಬಡವನೊಬ್ಬ ಮನೆ ಕೆಲಸಕ್ಕಿದ್ದ. ಈ ಶ್ರೀಮಂತನ ಗುಣ-ನಡತೆಗಳನ್ನು ತಿಳಿದ ಇವನು ಅವರ ಮನೆಯ ಕೆಲಸ ಬಿಟ್ಟ.

ನಂತರ ಈ ಪುಡಾರಿ ತನ್ನ ಅಕ್ಕ-ತಂಗಿಯರನ್ನು ಕೆಲಸಕ್ಕೆ ಕಳುಹಿಸುವಂತೆ ಕೃಷ್ಣಮೂರ್ತಿಯನ್ನು ಒತ್ತಾಯಿಸಿದರು. ಅಕ್ಕ-ತಂಗಿಯರ ಮಾನ ಉಳಿಸುವ ಉದ್ದೇಶದಿಂದ ಒತ್ತಾಯಗಳಿಗೆ ಮಣಿಯದೆ ಅದನ್ನು ನಿರಾಕರಿಸಿದ ಪರಿಣಾಮ ಕೃಷ್ಣಮೂರ್ತಿ ಬೆಳೆದಿದ್ದ ಬೆಳೆಗಳು ನಾಶವಾಯಿತಲ್ಲದೆ ಅವನಿಗೆ ಕೊಲೆಯ ಬೆದರಿಕೆ ಹಾಕಲಾಯಿತು.

ಇದರಿಂದ ಭಯಗೊಂಡ ಕೃಷ್ಣಮೂರ್ತಿ ದಿನಾಂಕ ೫-೯-೮೨ ರಂದು ಇಲ್ಲಿನ ಠಾಣಾಧಿಕಾರಿಗಳಿಗೆ ದೂರು ಸಲ್ಲಿಸಿದ. ದಿನಾಂಕ ೭-೯-೮೨ ರಂದು ಠಾಣಾಧಿಕಾರಿ ಲಕ್ಷ್ಮಣ್‌ರವರು ಸಂಬಂಧಿತರನ್ನು ಕರೆಸಿ ವಿಚಾರಣೆ ನಡೆಸಿ ಕಾನೂನನ್ವಯ ಕ್ರಮ ಕೈಗೊಂಡರು.

ಇದರಿಂದ ರೋಷಗೊಂಡ ಹುಡಿ ಪುಡಾರಿಗಳು "ಠಾಣಾಧಿಕಾರಿಯವರು ನಮ್ಮ ಗೌರವ ಹಾಗೂ ಪ್ರತಿಷ್ಠೆಗೆ ಧಕ್ಕೆ ಮಾಡಿದ್ದಾರೆ" ಎಂಬ ಕುರುಡು ನೆಪದೊಡನೆ ಮೇಲಧಿಕಾರಿಗಳಿಗೆ ದೂರು ನೀಡಿ ಠಾಣಾಧಿಕಾರಿಗಳನ್ನು ವರ್ಗ ಮಾಡಲು ಭಾರೀ ಯತ್ನ ಮಾಡಿದರು. ಪರಿಣಾಮವಾಗಿ ಜಿಲ್ಲಾ ರಕ್ಷಣಾಧಿಕಾರಿಗಳು ಇಲ್ಲಿಗೆ ಬಂದರು.

ಸೆ. ೧೧ರಂದು ಬೇಗಾನೆ ರಾಮಯ್ಯ ಭೇಟಿ ಕೊಟ್ಟಾಗ ಠಾಣಾಧಿಕಾರಿಯನ್ನು ವರ್ಗಾಯಿಸಬಾರದೆಂದು ಸುಮಾರು ೪೦೦ ಜನ ಸಹಿ ಮಾಡಿದ್ದ ಮನವಿಪತ್ರವೊಂದನ್ನು ಸಲ್ಲಿಸಲಾಯಿತಲ್ಲದೆ ಪ್ರವಾಸಿ ಮಂದಿರದಲ್ಲಿ ಭಾರಿ ಜನ ಘೇರಾಯಿಸಿದರು.

ಇದರಿಂದ ದಿಕ್ಕೆಟ್ಟ ಪುಡಾರಿಗಳು "ವರ್ಗ ಮಾಡಬೇಕೆಂದು ನಾವೇನೂ ಹೇಳುತ್ತಿಲ್ಲ. ಇದು ನಮ್ಮ ಮರ್ಯಾದೆ ಪ್ರಶ್ನೆ" ಎಂದು ಏನೇನೋ ಸಬೂಬು ಹೇಳಿದರು.

ಕೊನೆಗೆ ಜಿಲ್ಲಾ ರಕ್ಷಣಾಧಿಕಾರಿಗಳು ವಿಚಾರಣೆ ನಡೆಸಿ ರಾಜಿ ಮಾಡಿದ್ದಾರಾದರೂ 'ಪ್ರಭಾವಿ'ಗಳ ಕೆಂಗಣ್ಣು ದೃಷ್ಟಿ ಠಾಣಾಧಿಕಾರಿಯ ಮೇಲೆ ಇದ್ದೇ ಇದೆ ಎನ್ನಲಾಗಿದೆ.

ಕೆಸವೆ ಗ್ರಾಮಕ್ಕೆ ವಿದ್ಯುಚ್ಛಕ್ತಿ ಅನಿಶ್ಚಿತ

ಕೆಸವೆ: ಕೊಪ್ಪ ತಾ||ನ ಕೆಸವೆಗ್ರಾಮಕ್ಕೆ ಮತ್ತು ಗುಣವಂತೆ ಗ್ರಾಮದ ಗೋಳಗಾರಿಗೆ ಒಟ್ಟು ಸುಮಾರು ೨೫ ಮನೆಗಳಿಗೆ ದೀಪ ಹಾಗೂ ಸುಮಾರು ೬೫–೭೦ ಅಶ್ವಶಕ್ತಿಯಷ್ಟು ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸುವ ಕೊಂಡಗುಳಿ ಟ್ರಾನ್ಸ್‌ಫಾರ್ಮರ್ ೩ ತಿಂಗಳ ಹಿಂದೆ ಸುಟ್ಟುಹೋಗಿದೆ. ಸದ್ಯಕ್ಕೆ ತಲಮಕ್ಕಿ ಎಸ್ಟೇಟಿಂದ ಸಂಪರ್ಕ ಕೊಡಲಾಗಿದೆಯಾದರೂ ಯಾರಾದರೂ ಪಂಪ್‌ಸೆಟ್ ಚಾಲೂ ಮಾಡಿಬಿಟ್ಟರೆ ಊರಿಗೆಲ್ಲ ಕತ್ತಲಾಗುವ ಪರಿಸ್ಥಿತಿಯಿದೆ.

ಬದಲಿ ಟ್ರಾನ್ಸ್‌ಫಾರ್ಮರ್ ಹಾಕಿ ವಿದ್ಯುತ್ ಸರಬರಾಜಿನ ಅನಿಶ್ಚಿತತೆ ತೊಲಗಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಜಫ್ತಿ ಮಾಡಿದ್ದ ಚರಾಸ್ತಿ ವಾಪ್ಸು

ಕೊಪ್ಪ: ಅತ್ತಿಕುಡಿಗೆ ಗ್ರಾಮದ ಸಣ್ಣ ಕೂಸನಹಡ್ಲು ಶ್ರೀಧರಮೂರ್ತಿ ಎಂಬವರ ಮನೆಯಿಂದ ಕಂದಾಯ ಇಲಾಖೆ ಅಧಿಕಾರಿಗಳು ಮುನ್ಸೂಚನೆ ಸಹ ಕೊಡದೆ ಏ. ೭ ರಂದು ಜಫ್ತಿ ಮಾಡಿದ್ದ ತಾಮ್ರದ ಮನೆಬಳಕೆ ಪಾತ್ರೆಗಳನ್ನು ಕೊಪ್ಪ ಮತ್ತು ತೀರ್ಥಹಳ್ಳಿ ತಾ| ರೈತ ಸಂಘಗಳ ಮುಖಂಡರ ಸಮಕ್ಷಮದಲ್ಲಿ ತಹಸೀಲ್ದಾರರು ವಾಪಸು ಕೊಡಿಸಿರುವುದಾಗಿ ಗೊತ್ತಾಗಿದೆ. ತಮ್ಮ ದ ಒಂದು ಜೋಡಿ ತೀವ್ರ ಜಖಂ ಆಗಿರುವುದಾಗಿ ಶ್ರೀಧರಮೂರ್ತಿ ತಹಸೀಲ್ದಾರರಿಗೆ ದೂರಿತ್ತಿದ್ದಾರೆ. ತಾವೀಗ ಅಧಿಕಾರಿಗಳ ವಿರುದ್ಧ ಮಾನನಷ್ಟ ಮೊಕದ್ದಮೆಗಾಗಿ ಕಾನೂನಿನ [illegible] ಪಡೆಯುತ್ತಿರುವುದಾಗಿ [illegible]ವರು 'ಮುಂಜಾವು'ಗೆ ತಿಳಿಸಿದ್ದಾರೆ.

೨ನೇ ಪುಟದಲ್ಲಿರುವ '....ಗಣಪತಿಯ ಅವನತಿ' ಲೇಖನ ಬರೆದವರು ಎಸ್.ಎಸ್. ವಿಶ್ವೇಶ್ವರ, ಎಂ. ಎ.

ಕಾವಡಿಯಲ್ಲಿ ಹರಿಜನರಿಗೆ ಜಮೀನಿನ ಹಕ್ಕುಪತ್ರ ನೀಡಿಕೆ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಸಮೀಪದ್ದ ಕಾವಡಿ ಗ್ರಾಮದಲ್ಲಿ ೧೫ ಮಂದಿ ಹರಿಜನರಿಗೆ ತಲಾ ೨ ಎಕರೆಯಂತೆ ತರಿಗೆ ಯೋಗ್ಯವಾದ ಜಮೀನು ಮಂಜೂರಾಗಿದ್ದು ಅದರಹಕ್ಕುಪತ್ರಗಳನ್ನು ಸೆ. ೧೨ರಂದು ಬೇಗಾನೆ ರಾಮಯ್ಯ ವಿತರಣೆ ಮಾಡಿದರು. ಈ ಜಮೀನಿಗೆ ತುಂತುರು ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆಯೂ ಅವರು ಭರವಸೆ ನೀಡಿದರು.

ತಾ.ಅ.ಮಂ. ಅಧ್ಯಕ್ಷ ಡಿ. ಕಳಸಪ್ಪ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿ ಜಿಲ್ಲಾ ಅಭಿವೃದ್ಧಿ ಸಹಾಯಕ ಎಂ.ಟಿ.ನಾತನ್‌ರವರು ಹಾಜರಿದ್ದರು. ತಹಸೀಲ್ದಾರ್ ಜಿ. ಅನಂತ ರಾವ್ ಸ್ವಾಗತಿಸಿ ಬಿಡಿಒ ಅನಂತಮೂರ್ತಿ ವಂದಿಸಿದರು.

ವಿದ್ಯಾರ್ಥಿಗಳ ನಡುವೆ ವಿರಸ ವ್ಯಕ್ತಿ ವಿಕಾಸಕ್ಕೆ ಮಾರಕ: — ಬೇಗಾನೆ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: "ವಿದ್ಯಾರ್ಥಿ ಸಂಘಗಳು ವ್ಯಕ್ತಿ ವಿಕಾಸಕ್ಕೆ ಉತ್ತಮ ಸಾಧನಗಳಾಗಿದ್ದು ವಿದ್ಯಾರ್ಥಿಗಳು ಯಾವುದೇ ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಂಡಲ್ಲಿ ಮಾತ್ರ ವ್ಯಕ್ತಿ ವಿಕಾಸ ಸಾಧ್ಯ" ಎಂದು ಬೇಗಾನೆ ರಾಮಯ್ಯ ಸೆ. ೧೩ರಂದು ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜು ವಿದ್ಯಾರ್ಥಿಸಂಘವನ್ನು ಉದ್ಘಾಟಿಸುತ್ತಾ ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಬೆಂಗಳೂರಿನ ಬಿ.ಎಂ.ಎಸ್. ಕಾಲೇಜಿನ ಪ್ರೊ|| ಕೃ. ನರಹರಿಯವರು ಶಿಸ್ತು-ಸಂಯಮ ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು.

ಯುವಕ ಸಂಘದ ಅವ್ಯವಸ್ಥೆ: ಸಂಬಂಧಿತರ ಪ್ರತಿಕ್ರಿಯೆ

ಕೊಪ್ಪ: ಬಂಡಿಗಡಿಯ ಯುವಕ ರೈತ ಸಂಘ ಕೆಲಸ ಮಾಡುತ್ತಿಲ್ಲವೆಂದು ಸೆ. ೧೨ರ 'ಮುಂಜಾವು' ನಲ್ಲಿ ಪ್ರಕಟವಾಗಿರುವ ಪತ್ರಕ್ಕೆ ಪ್ರತಿಕ್ರಿಯಿಸುತ್ತಾ, ಕೊಪ್ಪ ತಾ|| ಯುವಜನ ಒಕ್ಕೂಟದ ಅಧ್ಯಕ್ಷ ಹೆಚ್. ಎಂ. ಶ್ರೀಧರ್ ಮತ್ತು ಸಹಾಯಕ ಯುವಜನ ಸೇವಾಧಿಕಾರಿ ದೇವರಾಜ್ ಅವರುಗಳು, ಸದ್ಯದಲ್ಲೇ ಸದರಿ ಸಂಘದ ವ್ಯವಹಾರಗಳನ್ನು ಸರಿಪಡಿಸುವುದಾಗಿ ಪತ್ರಿಕೆಗೆ ತಿಳಿಸಿದ್ದಾರೆ. ಮೀಟಿಂಗ್ ನಡೆಯುವಿರುವುದು ಮತ್ತು ಕ್ರೀಡೋಪಕರಣ ಸ್ಥಳಾಂತರದ ಆರೋಪಗಳು ತಮಗೂ ಬಂದಿದ್ದು ಹಣಕಾಸಿನ ಅವ್ಯವಹಾರದ ಬಗ್ಗೆ ತಮಗೆ ದೂರು ಬಂದಿಲ್ಲವೆಂದೂ ದೇವರಾಜ್ ತಿಳಿಸಿದ್ದಾರೆ.

ಕೊಪ್ಪತಾ|| ರೈತಸಂಘದಸಭೆ: ರ್‍ಯಾಲಿಯಲ್ಲಿ ಭಾಗವಹಿಸುವ ಬಗ್ಗೆ ತೀರ್ಮಾನ

ಕೊಪ್ಪ: ಇಲ್ಲಿ ಸೆ. ೧೬ರಂದು ಹೆಚ್. ಜಿ. ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ನಡೆದ ತಾ|| ರೈತಸಮಿತಿಯ ಸಭೆ ಗಾಂಧೀ ಜಯಂತಿಯಂದು ಬೆಂಗಳೂರಲ್ಲಿ ನಡೆಯುವ ರೈತರ ರ್‍ಯಾಲಿಯಲ್ಲಿ ತಾ||ನ ಕನಿಷ್ಠ ೫೦೦ ಜನ ರೈತರು ಭಾಗವಹಿಸಬೇಕೆಂದು ತೀರ್ಮಾನಿಸಿತು. ತೀರ್ಥಹಳ್ಳಿಯ ರೈತ ಮುಖಂಡ ಕೂಡ್ಲು ವೆಂಕಟೇಶ್ ಸಭೆಯಲ್ಲಿ ಭಾಗವಹಿಸಿದ್ದರು.

ಪ್ರೌಢಶಾಲಾ ಕ್ರೀಡಾಕೂಟ: ಕೊಪ್ಪ ಕಿರಿಯ ಕಾಲೇಜಿಗೆ ಸಮಗ್ರ ಪ್ರಶಸ್ತಿ

ಕೊಪ್ಪ: ಸೆ. ೧೫ ಮತ್ತು ೧೬ರಂದು ಇಲ್ಲಿ ನಡೆದ ತಾ|| ಪ್ರೌಢಶಾಲಾ ಕ್ರೀಡಾಕೂಟದಲ್ಲಿ ಕೊಪ್ಪದ ಕಿರಿಯ ಕಾಲೇಜು ಬಾಲಕರ ವಿಭಾಗದ ಸಮಗ್ರ ಪ್ರಶಸ್ತಿ ಪಡೆಯಿತು; ೨ನೇ ಸ್ಥಾನ ಹರಿಹರಪುರದ ಕಿರಿಯ ಕಾಲೇಜಿಗೆ ದಕ್ಕಿತು. ಬಾಲಕಿಯರ ವಿಭಾಗದಲ್ಲಿ ಹರಿಹರಪುರ ಮತ್ತು ಕಮ್ಮರಡಿ ಕಿರಿಯ ಕಾಲೇಜುಗಳು ಮೊದಲೆರಡು ಸ್ಥಾನ ಪಡೆದವು.

ಬಾಲಕರ ವಿಭಾಗದ ವೈಯಕ್ತಿಕ ಪ್ರಶಸ್ತಿಯನ್ನು ಕೊಪ್ಪದ ಹೂವಯ್ಯ, ಜಯಪುರದ ರಮೇಶ್ ಹಂಚಿಕೊಂಡರು. ಬಾಲಕಿಯರ ವಿಭಾಗದಲ್ಲಿ ಹರಿಹರಪುರದ ಸೀತಮ್ಮ, ಬಸರೀಕಟ್ಟೆಯ ಸುಕನ್ಯ ಪ್ರಶಸ್ತಿ ಹಂಚಿಕೊಂಡರು

ಕ್ರೀಡಾ ಕೂಟದ ಉದ್ಘಾಟನೆಯನ್ನು ಎ. ಮನೋಹರ ರಾವ್ ಅಧ್ಯಕ್ಷತೆಯಲ್ಲಿ ಬೇಗಾನೆ ರಾಮಯ್ಯ ನೆರವೇರಿಸಿದರು. ಬಿ. ಜಿ. ಚಿದಂಬರ್ ಮುಖ್ಯ ಅತಿಥಿಯಾಗಿದ್ದರು. ಎಂ.ಡಿ. ಬಾಲಕೃಷ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ವಿಜೇತರಿಗೆ [illegible] ಬಹುಮಾನ ಹಂಚಿದರು. ಪಿ.ಜಿ. [illegible] ಮುಖ್ಯ ಅತಿಥಿಯಾಗಿದ್ದರು.

ವೆಂಕಪ್ಪ, ಪಾರ್ವತಿಗೆ ವೈಯಕ್ತಿಕ ಪ್ರಶಸ್ತಿ

ಕೊಪ್ಪ: ತಾ|| ಮಟ್ಟದ [illegible] ಪ್ರಾ| ಶಾಲಾ ಕ್ರೀಡಾ ಕೂಟದಲ್ಲಿ [illegible] ನ ವೆಂಕಪ್ಪ ಹಾಗೂ [illegible] ವೈಯಕ್ತಿಕ ಪ್ರಶಸ್ತಿಗಳನ್ನು ಪಡೆದರು.

[illegible] ಬಾಲಕರ ಹಾಗೂ [illegible] ಕ್ಷೇತ್ರ ಪ್ರಶಸ್ತಿ [illegible] ಹಾಗೂ [illegible] ಪ್ರಶಸ್ತಿ [illegible]

ವೇದಿಕೆ

ರಾಷ್ಟ್ರೀಯ ಹೋರಾಟದ ಸಂಕೇತದಿಂದ ಕೊಳಕು ಸಂಸ್ಕೃತಿಯ ಪ್ರತಿನಿಧಿಯಾಗಿ

'ಗಣಪತಿ'ಯ ಅವನತಿ !

ಸಾರ್ವಜನಿಕ ಗಣಪತಿ ಕಾರ್ಯಕ್ರಮಗಳ ಆಚರಣೆಯ ಬಗ್ಗೆ ಪತ್ರಿಕೆಗಳಲ್ಲಿ ಆಗಾಗ್ಗೆ ಭಯಂಕರ ಸುದ್ದಿ ಬರುವುದು ಈಗೀಗ ಸಾಮಾನ್ಯವಾಗಿದೆ. ಆದರೆ ಈ ರೀತಿ ಹಿಗ್ಗಾಮುಗ್ಗ ಎಳೆದಾಡಲ್ಪಟ್ಟ ಗಣಪತಿ ಸಾರ್ವಜನಿಕ ಉತ್ಸವದ ಕೇಂದ್ರವಾದದ್ದು ನಮ್ಮ ದೇಶದ ರಾಷ್ಟ್ರೀಯ ಹಿನ್ನೆಲೆಯಲ್ಲಿ ಎನ್ನುವುದು ಗಮನಾರ್ಹ.

೧೯ನೇ ಶತಮಾನದ ಕೊನೆಯ ದಶಕಗಳವರೆಗೆ ಗಣಪತಿ, ಜನಪ್ರಿಯ ಖಾಸಗಿ ದೇವತೆಯಾಗಿದ್ದ ಇಂದಿನ ಆಡಂಬರ-ವಿಜೃಂಭಣೆಗಳಿಲ್ಲದೆ ಅವರವರ ಮನೆಯಲ್ಲೇ ಗಣೇಶ ಸಂತೋಷದಾಯಕನಾಗಿದ್ದ. ಗಣಪತಿಯ ಜನಪ್ರಿಯತೆಯನ್ನು ಗಮನಿಸಿದ ಲೋಕಮಾನ್ಯ ಬಾಲಗಂಗಾಧರ ತಿಲಕರು, ಗಣೇಶನ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವ ಹೊಸ ಬೆಳಕನ್ನು ಕಂಡರು. ಏಕೆಂದರೆ, ಅಂದಿನ ದಿನಗಳಲ್ಲಿ ನಮ್ಮ ಜನರಲ್ಲಿ ದೇಶಪ್ರೇಮ, ರಾಷ್ಟ್ರೀಯತೆ, ಐಕ್ಯತೆ ಈ ದಿಶೆಯಲ್ಲಿ ಅಜ್ಞಾನವೇ ತುಂಬಿತ್ತು. ಇಂತಹ ಹೀನಾಯ ಸ್ಥಿತಿಯಿಂದ ಭಾರತೀಯರನ್ನು ಬಡಿದೆಬ್ಬಿಸಲು ತಿಲಕರು ಹಲವಾರು ಯೋಜನೆಗಳನ್ನು ಹಾಕಿಕೊಂಡರು. ಅಂತಹ ಯೋಜನೆಗಳಲ್ಲಿ ಗಣೇಶೋತ್ಸವ ಬಹಳ ಮುಖ್ಯವಾದುದು.

ಅಂದಿನ ಬ್ರಿಟಿಷ್ ಆಳರಸರು ಭಾರತೀಯರನ್ನು ಸದಾ ಸಂಶಯ ದೃಷ್ಟಿಯಿಂದ ನೋಡುತ್ತಿದ್ದರು. ರಾಷ್ಟ್ರೀಯ ಪ್ರಜ್ಞೆಯಾಗಲಿ, ಐಕ್ಯತೆಯಾಗಲಿ, ಬೆಳೆಯುವ ಲಕ್ಷಣಗಳನ್ನು ಉಗ್ರ ಕ್ರಮಗಳ ಮೂಲಕ ಮೊಳಕೆಯಲೇ ಚಿವುಟಿ ಹಾಕುತ್ತಿದ್ದರು. ಇದರಿಂದಾಗಿ ಭಾರತೀಯರು ಗುಂಪುಕೂಡಿ ರಾಜಕೀಯ ಚರ್ಚೆಗಳಲ್ಲಿ ಭಾಗವಹಿಸುವ ಕ್ರಿಯೆಯಿಂದ ದೂರ ಉಳಿಯುತ್ತಿದ್ದರು, ಹಿಂದೆಗೆಯುತ್ತಿದ್ದರು. ಆದರೆ ಭಾರತೀಯರ ಧಾರ್ಮಿಕ ಆಚರಣೆಗಳ ವಿಷಯದಲ್ಲಿ ತಲೆ ಹಾಕುತ್ತಿರಲಿಲ್ಲ. ಗಣೇಶನನ್ನು ಮುಂದಿಟ್ಟುಕೊಂಡು, ಧಾರ್ಮಿಕ ಆಚರಣೆಯ ನೆರಳಿನಲ್ಲಿ ತಿಲಕರು ಜನರನ್ನು ಬಡಿದೆಬ್ಬಿಸುವ ಯೋಜನೆ ಹಾಕಿಕೊಂಡು ಗಣೇಶೋತ್ಸವವನ್ನು ಜನಪ್ರಿಯಗೊಳಿಸಿದರು. ಈ ಸಂದರ್ಭಗಳಲ್ಲಿ ತಿಲಕರು ಮತ್ತು ಅಪರ ಅನುಯಾಯಿಗಳು ಈ ದೇಶದ ಉಜ್ವಲ ಪರಂಪರೆಯನ್ನು, ಶಿವಾಜಿಯಂಥವರು ಸ್ವದೇಶಕ್ಕಾಗಿ ಮಾಡಿದ ತ್ಯಾಗವನ್ನು, ಮಹಾರಾಷ್ಟ್ರದ ಸಂತರು ಪ್ರಚುರಪಡಿಸಿದ ಸ್ವದೇಶದ ಹಿರಿಮೆಯನ್ನು – ಹೀಗೆ ಹಲವು ವಿಚಾರಗಳನ್ನು ಭಜನೆ-ದೇಶಭಕ್ತಿ ಗೀತೆ-ಸಂತವಾಣಿಗಳ ಮೂಲಕ ಪ್ರಚುರಪಡಿಸುತ್ತ ಕ್ರಮೇಣ ಜನರನ್ನು ತೂಕಡಿಕೆಯಿಂದ ಎಚ್ಚರಿಸಿ, ದೇಶದ ಬಗ್ಗೆ ಗೌರವ ಬೆಳೆಸುವಲ್ಲಿ ಗಣೇಶನನ್ನು ಸಮರ್ಥವಾಗಿ ಬಳಸಿಕೊಂಡರು. ತಿಲಕರೇ ಆಶ್ಚರ್ಯಪಡುವಂತೆ ಗಣಪತಿ ಜನರನ್ನು ತನ್ನೆಡೆ ಸೆಳೆದು ಅವರನ್ನು ಎಚ್ಚರಿಸಲು ಆರಂಭಿಸಿ ಬ್ರಿಟಿಷರ ವಿರುದ್ಧ ದೈವಿಕ ಹೋರಾಟವನ್ನೇ ಆರಂಭಿಸಿಬಿಟ್ಟ. (ಪುಟ ೩)

ಎಲ್ಲ ಅವನ ಮಕ್ಕಳು

ಮೇಲು ಕೀಳು ಎಂಬ ಅನೀತಿಯಿಂದ ಜಾತಿಯಾಗಿದೆ
ಸೃಷ್ಟಿಕರ್ತನಾದ ಅವನ ಎಲ್ಲ ಮರೆತ ಹಾಗಿದೆ
ಪಂಚ ಭೂತದಿಂದ ಆದ ದೇಹವೆಲ್ಲ ಒಂದೆ
ಎಲ್ಲರಿಗೂ ಜೀವಕೊಟ್ಟ ಒಬ್ಬ ನಮ್ಮ ತಂದೆ
ಮಳೆಯ ನೀರು ಎತ್ತಬೀಳೆ, ಸೇರಬೇಕು ನದಿಯನೆ
ಸುತ್ತ ಹರಿವ ನದಿಗಳೆಲ್ಲ ಸೇರಬೇಕು ಕಡಲನೆ
ಹಳೆಯ ನೀರು, ಹೊಳೆಯ ನೀರು ಭೇದವಿಲ್ಲ ಕಡಲಿಗೆ
ಭೂಮಿ ಮೇಲೆ ಹರಿವತನಕ ಭೇದ ಜನರ ಕಣ್ಣಿಗೆ
ವಿವಿಧ ಗಿಡಗಳೆಲ್ಲಾ ಬೆಳೆಯೆ ಭೂಮಿಯ ತಾಯಿ ಒಬ್ಬಳೆ
ಸೈದಿಲೆಗೆ ಮಾತ್ರವಲ್ಲ ಇರುಳ ಬೆಳಗೊ ಶಶಿಕಲೆ
ರವಿಯ ಕಿರಣ ಸೋಕಬೇಕು ಪುಷ್ಪವೆಲ್ಲ ಅರಳಲು
ದುಂಬಿಗಿಲ್ಲ ಭೇದ ಭಾವ ಸವಿಯ ಜೇನು ಹೀರಲು
ಜನರ ದೇಹದಲ್ಲಿ ಹರಿವುದೊಂದೆ ಕೆಂಪು ರಕ್ತವು
ಜಾತಿಗೊಂದು ರಕ್ತವಿಲ್ಲ ಯಾಕೆ ಭೇದ ಭಾವವು
ದೇಹವನ್ನು ಬಿಟ್ಟು ಹೋಗೆ ಆತ್ಮನೆಂಬ ಜ್ಯೋತಿಯು
ಜಾತಿರಹಿತ ಆತ್ಮಗಳೆಲ್ಲಾ ಸೇರೆ ಅದುವೆ ದಿವ್ಯ ಜ್ಯೋತಿಯು
ನಮ್ಮನೆಲ್ಲ ಕುಣಿಸುತಿಹನು ಒಬ್ಬ ಸೂತ್ರಧಾರನು
ಅವನು ಕುಣಿಸಿದಂತೆ ತಾನೆ ಜಗದ ಜನರು ಕುಣಿವುದು
ಸೂತ್ರಧಾರಿ ಅವನ ಎದುರು ಭೂಮಿ ಒಂದು ತೊಟ್ಟಿಲು
ಉಚ್ಚ ನೀಚ ಭೇದವಿಲ್ಲ ಎಲ್ಲ ಅವನ ಮಕ್ಕಳು

—'ಶಿವದಾಸ'

ರಾಮಾಯಣವೇನು ಮಹಾ !

ಪ್ರಸ್ತುತ ಭಾರತದಲ್ಲಿ
ಚರಿತ್ರಾರ್ಹ ಹಗರಣಗಳು
ಅಪಹರಣ ಕೋಲಾಹಲಗಳು
ಹೆಮ್ಮಿಕೊಂಡಿರಲು
ಪುರಾಣ (ಗೊಡ್ಡು) ಪುಟಗಳನ್ನೇಕೆ
ತಿರುವಿ ಹಾಕಬೇಕು ?
ಮುಗ್ಧ ಸೀತೆಯನ್ನಪಹರಿಸುವ
ಚತುರ ರಾವಣ ಬ್ರಹ್ಮನಿಲ್ಲವೇನು ?
ಹಾಹಾಹಲಯುದ್ಧವೇನು ಮಹಾ
ವಿಧಾನ ಮಂಡಲದ ಕೋಲಾಹಲದ
ಮುಂದೆ !
ವಾನರ ಸೈನ್ಯದ್ದೊಂದು ಲೆಕ್ಕವೆ
ಪಕ್ಷಾಂತರ 'ಕೋತಿ'ಗಳ ಮುಂದೆ?
ಭೀಮ ಘಟೋತ್ಕಜರೆಲ್ಲಿ ಸಮ
'ಮಾಮೂಲಿ' ಬಕಾಸುರರ ಮುಂದೆ !
ನೊರೆ ಉಕ್ಕುವ 'ಸುರೆ' ಇರಲು
ಮೋಹಿನಿಯ ಅಮೃತವೇತಕ್ಕೆ ?
ಗರೀಬಿಗಳ ಕ್ಯಾ–ಬರೆಗಿಂತೇನು
ರಂಭೆ ಮೇನಕೆಯರ ಮೋಹಕ ನೃತ್ಯ !
ದಿನಪತ್ರಿಕೆಯ ಪುಟಪುಟದಲ್ಲಿ
ಕುಗ್ಗಿನಿಂತ ಭಾರತವನ್ನೊಮ್ಮೆ
ತಿರುಗಿಸಿ ನೋಡಿದರೆ ಸಾಲದೆ ?

–ಶ್ರೀಕಂಠ ಗುಂಡಪ್ಪ
(ಸೌಜನ್ಯ : 'ಆಂದೋಲನ')

ದಿಗಿಲು

ಎಂದಿನಿಂದಲೂ
ಉಟ್ಟಾಗ ಒಳ್ಳೆ ಖುಷಿ ಕೊಟ್ಟಿತ್ತು
ಸಂತೆಯಲ್ಲಿ ತಂದ
ಹೊಸಾ ಮುಂಡು
ಪಂಚೆ
ಕೊಳಕಾಯಿತೆಂದು,
(ಹೇನು ಕೂರೆಗಳ ಕಂಡು)
ಶುದ್ಧೀಕರಿಸಿದ ಮೇಲೀಗ
ತುಂಡು !
ಒಂದೂ ಹೊಳೆಯುತ್ತಿಲ್ಲ
ಹಿಂದೆ ಬಿಟ್ಟರಾಗಬಹುದೊ
ಮುಂದೆ ಬಿಟ್ಟರಾಗಬಹುದೊ
ಎಂದು !

ಕಳಕೊಂಡದ್ದು

ಅವನು
"ಕುರ್ರೋ...." ಎಂದಾಂತ
"ಬವ್...."
ಎನ್ನಹೋದ ನೀನು
ಕಳಕೊಂಡದ್ದ್ಯಾನಾಗ ?

– ಆಲ್ಮಕ್ಕಿ ಎಚ್. ಸತೀಶ, ಎಂ.ಎ.

"ಹಳ್ಳದ ನೆರೆಹಾವಳಿ ತಡೆಗಟ್ಟಲು ಕಲ್ಲುಕಟ್ಟ ಅಗತ್ಯ"

ಮಾನ್ಯರೇ,

ಶೃಂಗೇರಿತಾಲ್ಲೂಕು ಕಿಗ್ಗಾಹೋಬಳಿಯ ಸುಂಕದಮಕ್ಕಿ ಗ್ರಾಮದ ಪಶ್ಚಿಮ ದಿಕ್ಕಿನ ಜಲಾನಯನ ಪ್ರದೇಶದಿಂದ ಪೂರ್ವದಿಕ್ಕಿಗೆ ಹರಿದು ಬಂದು ತುಂಗಾನದಿಗೆ ಸೇರುವ, ಸಕಾಶೆಯಲ್ಲಿ ಕಂಡಿರುವ ಒಂದು ದೊಡ್ಡ ಹಳ್ಳವಿದೆ. ಈ ಹಳ್ಳವು ಸುಂಕದಮಕ್ಕಿ ಗ್ರಾಮದ ೯, ೧೪, ೧೫, ೧೭ ಮತ್ತು ೧೮ ಸರ್ವೆ ನಂಬರುಗಳಿಗೆ ಸೇರಿದ ತರಿ ಹಾಗೂ ಬಾಗಾಯ್ತು ಜಮೀನುಗಳ ಮಧ್ಯದಲ್ಲಿ ಹಾದುಹೋಗುತ್ತದೆ. ಈ ಸರ್ವೆ ನಂಬರುಗಳಲ್ಲಿ ಸುಮಾರು ೧೫ ಎಕ್ರೆ ತರಿ ಮತ್ತು ಬಾಗಾಯ್ತು ಜಮೀನುಗಳು ಇದ್ದು, ಈ ಗ್ರಾಮದಲ್ಲಿ ವಾಸವಾಗಿರುವ ಸಣ್ಣ ಹಾಗೂ ಅತಿಸಣ್ಣ ರೈತರು ಇದರ ಸಾಗುವಳಿದಾರರಾಗಿರುತ್ತಾರೆ.

ಪ್ರತಿವರ್ಷದ ಮಳೆಗಾಲದಲ್ಲಿ ಹಳ್ಳದ ಮಹಾಪೂರದಿಂದ ಇದರ ಎಡದಂಡೆಯ ತಗ್ಗು ಪ್ರದೇಶದ ತರಿ ಭೂಮಿ ಹಾಗೂ ಪೈರುಗಳು ನೆರೆಹಾವಳಿಗೆ ಗುರಿಯಾಗುತ್ತಿದ್ದು, ಬಡ ರೈತರು ಭಾರಿ ನಷ್ಟಕ್ಕೆ ಗುರಿಯಾಗುತ್ತಿದ್ದಾರೆ. ಮಳೆಗಾಲದ ಈ ನೆರೆಹಾವಳಿಯನ್ನು ತಡೆಗಟ್ಟಲು ಸಾಗುವಳಿದಾರರು ತಾತ್ಕಾಲಿಕವಾದ ಮಣ್ಣಿನ ದಂಡೆಯನ್ನು ಪ್ರತಿವರ್ಷ ನಿರ್ಮಿಸುತ್ತಾರೆ. ಆದರೆ ಜಮೀನಿನ ರಕ್ಷಣೆಗೆ ಬೇರೆ ವಿಧವಾದ ಸುಧಾರಿತ ಕ್ರಮ ಕೈಗೊಳ್ಳಲು ಆರ್ಥಿಕವಾಗಿ ದುರ್ಬಲವಾಗಿರುವ ಕಾರಣದಿಂದ ಅವರಿಗೆ ಸಾಧ್ಯವಾಗಿಲ್ಲ.

ಈ ವರ್ಷ ಜುಲೈ ತಿಂಗಳಿನಲ್ಲಿ ಈ ಹಳ್ಳದಲ್ಲಿ ಹಠಾತ್ತನೆ ರಾತ್ರಿವೇಳೆ ಬಂದ ಭಾರಿ ಪ್ರವಾಹದ ಕಾರಣ ತಾತ್ಕಾಲಿಕ ರಕ್ಷಣೆಗಾಗಿ ನಿರ್ಮಿಸಲಾದ ಮಣ್ಣಿನ ದಂಡೆಯು ಪ್ರವಾಹದ ಹೊಡೆತದಿಂದ ಒಡೆದುಹೋಯಿತು. ಪರಿಣಾಮವಾಗಿ ಹಳ್ಳದ ಪ್ರವಾಹವು ತಗ್ಗುಪ್ರದೇಶದಲ್ಲಿ ಸಾಗುವಳಿ ಮಾಡಿದ ತರಿ ಭೂಮಿಯ ಮೇಲೆ ಹಾದು ಹೋಯಿತಲ್ಲದೆ, ಐದಾರು ಎಕ್ರೆ ತರಿಭೂಮಿಯನ್ನು ಕೊಚ್ಚಿಕೊಂಡು ಹೋಯಿತು. ಇದರಿಂದ ಬಡರೈತರು ಸಾವಿರಾರು ರೂಪಾಯಿ ನಷ್ಟಕ್ಕೆ ಗುರಿಯಾದರು. ಅಲ್ಲದೆ ನೆರೆಹಾವಳಿ ಬಗ್ಗೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ರೈತರು ಕಿಂಚಿತ್ ಪರಿಹಾರಧನವನ್ನೂ ಪಡೆದರು. **ವಿಪರ್ಯಾಸವೆಂದರೆ, ಭಾರಿ ನಷ್ಟವನ್ನು ಅನುಭವಿಸಿದ ರೈತರಿಗಿಂತ ನಷ್ಟವನ್ನೇ ಅನುಭವಿಸದ ರೈತರಿಗೆ ಜಾಸ್ತಿ ಪರಿಹಾರ ಧನ ದೊರೆಯಿತು !** ಆದ್ದರಿಂದ ಸರ್ಕಾರ ನೀಡಿರುವ ಕಿಂಚಿತ್ ಪರಿಹಾರ ಧನದಿಂದ ರೈತರು ನೆರೆಹಾವಳಿ ತಡೆಗಟ್ಟಲು ಹಾಗೂ ಪೈರುಗಳನ್ನು ರಕ್ಷಿಸಲು ಶಾಶ್ವತವಾದ ಪರಿಹಾರ ಮಾರ್ಗವನ್ನು ಕಾಣಲು ಅಸಾಧ್ಯವಾಗಿದೆ.

ಈ ಸಮಸ್ಯೆಗೆ ಸರಿಯಾದ ಪರಿಹಾರವೆಂದರೆ, ಈ ಹಳ್ಳಕ್ಕೆ ಸೂಕ್ತ ಸ್ಥಳದಲ್ಲಿ, ಅಂದರೆ ಮಳೆಗಾಲದ ಪ್ರವಾಹ ನುಗ್ಗುವ ಸ್ಥಳದಲ್ಲಿ, ಶಾಶ್ವತವಾಗಿ ಜಮೀನಿಗೆ ರಕ್ಷಣೆ ನೀಡುವಂತಹ ಸುಮಾರು ೧೦೦ ಅಡಿ ಉದ್ದದ ಭದ್ರವಾದ ಒಂದು "ಕಲ್ಲು ಕಟ್ಟ" ದ ನಿರ್ಮಾಣ. ಸಾಧ್ಯವಾದಷ್ಟೂ ಸ್ಥಳದಲ್ಲಿಯೇ ದೊರೆಯಬಹುದಾದ ಸಾಮಗ್ರಿಗಳನ್ನು ಬಳಸಿಕೊಂಡು ಕಡಿಮೆ ವೆಚ್ಚದಲ್ಲಿ ಈ ಕಲ್ಲುಕಟ್ಟವನ್ನು ನಿರ್ಮಿಸಬಹುದು. ಈ ಕಾಮಗಾರಿಯನ್ನು ತಾಲ್ಲೂಕು ಅಭಿವೃದ್ಧಿ (೩ನೇ ಪುಟಕ್ಕೆ)

ಓದುಗರ ಪತ್ರಗಳು

ಜಾಹೀರಾತು ಕರೆ : "ಉದ್ಯೋಗ ಕೊಡುವ ಉದ್ದೇಶವಿತ್ತೆ?"

["ಮುಂಜಾವು" ವಾರಪತ್ರಿಕೆ
ಸಂಪಾದಕರಿಗೆ,
ನನ್ನ ಈ ಪತ್ರವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಕೋರುತ್ತೇನೆ.]

ಕೊಪ್ಪ ಕ್ಷೇತ್ರಾಭಿವೃದ್ಧಿ ಅಧಿಕಾರಿ ಮಹಾಶಯರಿಗೆ ಬರೆದು ತಿಳಿಸಬಯಸುವುದೇನೆಂದರೆ, ತಮ್ಮ ತುರ್ತಿನ ಜಾಹೀರಾತು ಒಂದು ಚಿಕ್ಕಮಗಳೂರಿನ "ಜನಮಿತ್ರ"ದಲ್ಲಿ ತಾ. ೭–೯–೧೯೮೬ರಂದು ಪ್ರಕಟಣೆಯಾಗಿದ್ದನ್ನು ನೋಡಿ ತುಂಬಾ ಆಶ್ಚರ್ಯಪಡುತ್ತೇನೆ. ನಿಮ್ಮ ಈ ಜಾಹಿರಾತಿನಿಂದ ಯಾವ ಮಹಿಳೆಗಾದರೂ ಕೆಲಸ ಕೊಡಬೇಕು ಎಂಬ ಉದ್ದೇಶದಿಂದ ಪ್ರಕಟಿಸಿದ್ದಿರೋ? ಅಥವ ತಮಗೆ ಬೇಕಾದವರನ್ನು ಸದ್ರಿ ಕೆಲಸಕ್ಕೆ ಈ ಮೊದಲೇ ನೇಮಕ ಮಾಡಲು ನಿರ್ಧರಿಸಿ, ನಂತರ ಈ ಜಾಹೀರಾತನ್ನು ಕೊಟ್ಟು ಸಾರ್ವಜನಿಕರನ್ನು ಮೋಸಗೊಳಿಸುವುದಕ್ಕೋಸ್ಕರ ಹಂಚಿಕೆ ಹೂಡಿದ್ದೀರೋ ಎಂದು ಅನುಮಾನ ಉಂಟಾಗುತ್ತದೆ.

ತಮ್ಮ ಜಾಹೀರಾತಿನ ಪ್ರಕಾರ ಒಂದೇ ಒಂದು ದಿನದೊಳಗೆ ತಮಗೆ ಅರ್ಜಿ ತಲುಪಲು ಸಾಧ್ಯವೆ? ಇದರ ನಂತರ ೧೧ನೇ ತಾರೀಖಿನಲ್ಲಿಯಾದರೂ ಯಾವ ರೀತಿಯಲ್ಲಿ ತಾವು ಪ್ರಕಟಿಸಿರುವ ಪ್ರಕಾರ ತಮ್ಮ ಮುಂದೆ ಸಂದರ್ಶನಕ್ಕೆ ಹಾಜರಾಗಲು ಸಾಧ್ಯ?

ಈ ಮೇಲ್ಕಂಡ ಎಲ್ಲಾ ಅನುಮಾನಗಳೂ ಇರುವುದರಿಂದ ತಾವು ಶಿಶುವಿಹಾರಕ್ಕೆ ನೇಮಿಸಿಕೊಳ್ಳಲು ಹುದ್ದೆಗಳ ಅರ್ಜಿ ಆಹ್ವಾನ ಮತ್ತು ಸಂದರ್ಶನವನ್ನು ಸಾಕಷ್ಟು ಕಾಲಾವಕಾಶ ಕೊಟ್ಟು ನಿರುದ್ಯೋಗಿ ಬಡ ಮಹಿಳೆಯರಿಗೆ ಸಹಾಯವಾಗಲು ಪುನರ್ ಪರಿಶೀಲಿಸಬೇಕೆಂದು ಒತ್ತಾಯಪಡಿಸುತ್ತೇನೆ. ಇಲ್ಲವಾದರೆ ಇದರಲ್ಲಿ ಯಾವುದೋ ಮೋಸವಿದೆ ಎನ್ನುವುದನ್ನು ಸಾರ್ವಜನಿಕರು ಮನಗಾಣುವುದು ಖಂಡಿತ. ಈ ಪತ್ರದ ನಕಲನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿರುತ್ತೇನೆ.

ಇತಿ ತಮ್ಮ ವಿಶ್ವಾಸಿ,
–ಹೆಚ್. ಆರ್. ದಾಕ್ಷಾಯಿಣಿ
ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸದಸ್ಯೆ,
ರಾಮನಹಳ್ಳಿ, ಚಿಕ್ಕಮಗಳೂರು.

ಅಕ್ಕಿ ಕಳವು: 'ಪೋಲೀಸರಿಗೆ ದೂರು ಕೊಡಲಾಗಿತ್ತು'

ಮಾನ್ಯರೇ,

೨೨–೮–೮೬ರ 'ಮುಂಜಾವು' ಪತ್ರಿಕೆಯಲ್ಲಿ ಜೊಮ್ಮಾಪುರ ಕಳ್ಳತನದ ಬಗ್ಗೆ ಪತ್ರ ಪ್ರಕಟವಾಗಿರುವುದು ಸರಿಯಷ್ಟೆ. ಅದರ ಜೊತೆಯಲ್ಲಿ ಪತ್ರಿಕೆಗಳಿಗೆ ಬರೆಯುವ ಮೊದಲು ಪೋಲೀಸರಿಗೆ ದೂರು ಕೊಡಬೇಕೆಂದು ಗ್ರಾಮಸ್ಥರಿಗೆ ನೀವು ಸಲಹೆ ಮಾಡಿದ್ದೀರಿ. ವಾಸ್ತವವಾಗಿ ಗ್ರಾಮಸ್ಥರು ಕೊಪ್ಪ ಪೋಲೀಸರಿಗೆ ದೂರು ಕೊಟ್ಟಿದ್ದು ಕೊಪ್ಪ ಪೋಲೀಸರು ಕಳ್ಳನನ್ನೂ, ಅಕ್ಕಿ ಕೊಂಡವರನ್ನೂ ಅಕ್ಕಿ ಕಳೆದುಕೊಂಡವರನ್ನು ಒಟ್ಟಿಗೆ ಕರೆಸಿ ಒಂದು ಇತ್ಯರ್ಥ ಮಾಡಿದ್ದರು. ಅಕ್ಕಿ ಕೊಂಡವರು ೩೫ಕಿಲೊ ಅಕ್ಕಿಯನ್ನು ಕಳಕೊಂಡವರಿಗೆ ಹಿಂದಿರುಗಿಸಬೇಕೆಂದು ತೀರ್ಮಾನಮಾಡಿ ಪ್ರಕರಣವನ್ನು ಅಂತ್ಯಗೊಳಿಸಿದ್ದರು.

ಸದ್ರಿ ಪತ್ರ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದ ನಂತರ ಪಾರ್ಟಿಗಳನ್ನು ಪುನಃ ಕರೆಸಿ ಅವತ್ತಿನ ತೀರ್ಮಾನವನ್ನು ಜಾರಿ ಮಾಡಿದ್ದಾರೆ. ಇದಿಷ್ಟು ನಡೆದ ಸಂಗತಿ.

–ಮಂಜಯ್ಯ ಶೆಟ್ಟಿ, ಜೊಮ್ಮಾಪುರ.

ಅಭಿನಂದನೆಗಳು

ಮಾನ್ಯ ಸಂಪಾದಕರೆ,

"ದೀವಟಿಗೆ"ಯ ತಾ|| ೨೫–೭–೮೬ರ ಸಂಚಿಕೆಯಲ್ಲಿ "ಹಿಂದುಳಿದ ಹಳ್ಳಿಗಳಿಗೆ ಬೇಕಾಗಿದೆ ಒಂದು ಕಾಲುದಾರಿ ಸೇತುವೆ" ಎಂಬ ಶೀರ್ಷಿಕೆಯಲ್ಲಿ ಗ್ರಾಮಾಂತರ ಪ್ರದೇಶಗಳ ಸಂಚಾರ ಸೌಲಭ್ಯಕ್ಕೆ ಅಗತ್ಯವಾದ ಒಂದು ಕಾಲುದಾರಿ ಸೇತುವೆ ನಿರ್ಮಾಣವನ್ನು ಕುರಿತು ಯುವಕ ರೈತ ಸಂಘದವರು ಕಳುಹಿಸಿರುವ ಲೇಖನವನ್ನು ಪ್ರಕಟಿಸಿದ ನಿಮಗೆ ನಮ್ಮ ಅಭಿನಂದನೆಗಳು.

ಅಧ್ಯಕ್ಷರು ಮತ್ತು ಸದಸ್ಯರು,
ಕನ್ನಡ ಯುವಕ ರೈತ ಸಂಘ,
ಯಡದಾಳ, ಶೃಂಗೇರಿ ತಾಲ್ಲೂಕ್

ನೀಲಗಿರಿ : "ರೈತನ ಶತ್ರು"

ಎಲ್ಲಾ ಸೌಕರ್ಯಗಳಿಂದ ರೈತನನ್ನು ವಂಚಿಸುತ್ತಿರುವ ಸರ್ಕಾರ ಈಗ ಮಳೆಯಿಂದಲೂ ರೈತನನ್ನು ವಂಚಿಸಲು ಹಠತೊಟ್ಟಂತಿದೆ. ನೀಲಗಿರಿ ಎಂಬ ಮರಗಳನ್ನು ಸಿಕ್ಕಿದ ಕಡೆ ನೆಡುತ್ತಿದ್ದಾರೆ. ಕಾಡಿನಲ್ಲಿ ಪ್ರಕೃತಿಯ ಸಮತೋಲನ ಕಾಯುವ ಮರಗಳನ್ನೆಲ್ಲಾ ಕಡಿದು ಸೂರೆಮಾಡಿ ಭೂಮಿಯ ತೇವಾಂಶವನ್ನೆಲ್ಲಾ ಹೀರಿ ಬರಡುಗೊಳಿಸುವ ಹನಿಮಳೆ ಬೀಳದಂತೆ ಮಾಡುವ ನೀಲಗಿರಿಮರಗಳನ್ನು ಬೆಳೆಸುತ್ತಿದ್ದಾರೆ. ಪರಿಸರ ವಿಜ್ಞಾನಿಗಳು ಈ ಮರಗಳಿಂದ ಆಗುತ್ತಿರುವ ಹಾನಿಯನ್ನು ಎಷ್ಟು ವರ್ಷಗಳ ಹಿಂದೆಯೇ ತಿಳಿಸಿದ್ದಾರೆ. ಆದರೂ ನಮ್ಮ ಅರಣ್ಯ ಇಲಾಖೆಯ ಜನಗಳಿಗೂ, ಈ ಮರಗಳಿಗೂ ಬಿಡಿಸಲಾರದ ನಂಟು. ಕಾಡಿನಲ್ಲಿ ನೆಟ್ಟಿದ್ದು ಸಾಲದೆಂದು ಈಗ ರಸ್ತೆಯ ಇಕ್ಕೆಲಗಳಲ್ಲೂ ಇದರ ಸಸಿಗಳನ್ನು ನೆಡುವ ಕಾರ್ಯ ಭರದಿಂದ ಸಾಗಿದೆ. ಕೇಳಿದವರಿಗೆ ಪುಕ್ಕಟೆ ಕೊಡುವುದಲ್ಲದೆ ದಾರಿಹೋಕರನ್ನು ಕರೆದು ಕೇಳಿದಷ್ಟು ಕೊಡಲಾಗುತ್ತಿದೆ. ಒಟ್ಟಿನಲ್ಲಿ ಇಂಡಿಯಾದ ಭೂಮಿಯೆನ್ನೆಲ್ಲಾ ಬೆಂಗಾಡು ಮಾಡಿದ ಹೊರತು ಈ ಜನಕ್ಕೆ ನಿದ್ದೆ ಬೀಳದು. ಈಗ ರೈತರಿಗೆ ಉಳಿದ ಉಪಾಯ ಒಂದೇ. ಈ ಮರಗಳ ವಿರುದ್ಧ ಸಮರ ಸಾರುವುದು. ಇತರ ದೇಶಗಳಲ್ಲಿ ಈ ಕೆಲಸವನ್ನು ಬಹಳ ಹಿಂದೆಯೇ ಮಾಡಲಾಗಿದೆ. ತಮ್ಮ ಹೊಲಗದ್ದೆಗಳ ಸುತ್ತ ಈ ಸಸಿಗಳೇನಾದರೂ ಕಂಡು ಬಂದರೆ ಕಿತ್ತು ಬಿಸುಡುವುದು ಇನ್ನೂ ಒಳ್ಳೆಯ ಕೆಲಸ.

—ಎ. ಡಿ'ಸಿಲ್ವ, ಚಾಮರಾಜನಗರ
('ರೈತ ರಾಯಭಾರಿ'ಯಲ್ಲಿ ಪತ್ರ)

"ದಕ್ಷ ಠಾಣಾಧಿಕಾರಿಯ ವರ್ಗಾವಣೆ ಯತ್ನವನ್ನು ವಿರೋಧಿಸಿ"

ನ.ರಾ.ಪುರ ಪೋಲೀಸ್ ಠಾಣಾಧಿಕಾರಿ ಶ್ರೀ ಲಕ್ಷ್ಮಣ್ ರನ್ನು ಊರಿನ ಪ್ರ(ಕು)ಖ್ಯಾತ ಮುಖಂಡರಿಂದ ವರ್ಗಾವಣೆ ಯತ್ನ ನಡೆದಿದೆ. ಈ ದಕ್ಷ ಅಧಿಕಾರಿಯ ಒಳ್ಳೆತನ ಸಹಿಸದ(ಬೇ)ಜವಾಬ್ದಾರಿಯ ಮುಖಂಡರು ಶ್ರೀ ಜೀಗಾನೆ ರಾಮಯ್ಯನವರ ಕಿವಿಯಲ್ಲಿ ಶಂಖ ಊದಿದರೂ, ಪರಿಣಾಮವಾಗಲಿಲ್ಲ. ಕಟ್ಟಕಡೆಯದಾಗಿ ಎಸ್ಪಿಯವರ ಆಗಮನ. ಸ್ವಲ್ಪ ಹೊತ್ತು ಎರಡೂ ಕಡೆಯಿಂದ ಮಾತುಗಳ ಕೇಳಿಕೆ.

ಈ ನ.ರಾ.ಪುರ ತಾಲ್ಲೂಕಿನ ಮುಕ್ಕಾಲು–ಮೂರುಪಾಲು ಜನ ಒಳ್ಳೆಯವರು ಆದರೆ ಮೆತ್ತಗಿನವರು. ಯಾವುದೇ ವಿಷಯಕ್ಕೂ ೨-೩ ಜನ ಸೇರಿದಾಗ ಪಿಸು ಮಾತಿನಲ್ಲಿಯೇ ಯಾವುದಾದರೂ ಸುದ್ದಿಯ ಆರಂಭ ಹಾಗು ಅಂತ್ಯ. ಪರಿಣಾಮ ಮಾತುಗಳೆಲ್ಲವೂ ಗಾಳಿಯಲ್ಲಿ ಲೀನ. ಅಲ್ಲಲ್ಲಿ ಭೂ ಮಾಲೀಕರ, ಕಳ್ಳ ಸಾಗಣೆದಾರರ, ಅರಣ್ಯ ಲೂಟಿ ಹೊಡೆಯುವವರ, ಕಾಮ ಪಿಪಾಸುಗಳ ದಬ್ಬಾಳಿಕೆ ದೌರ್ಜನ್ಯವನ್ನು ಈ ಠಾಣಾಧಿಕಾರಿ ಬಂದಾಗಿನಿಂದಲೂ ಹತ್ತಿಕ್ಕಲು ಪ್ರಯತ್ನಿಸಿದ್ದೇ ಈ ಅಧಿಕಾರಿಯ ದೊಡ್ಡ ಲೋಪ. ಈ ತರಹದ ಮುಖಂಡರು ಠಾಣೆಗೆ ಬಂದಾಗ ಅವರಿಗೆ ಮರ್ಯಾದೆ ಬೇರೆ ಬೇಕಂತೆ !

ಒಂದು ತಲ್ಲಣಿಸುವ ವಿಚಾರವೆಂದರೆ ನಮ್ಮ ಜನರ ಮನೋಭೂಮಿಕೆಯೇ ಅತ್ಯಂತ ಸಪ್ಪೆಯಿರುವುದು ಹಾಗೂ ಉದಾಸೀನ ಮನೋಭಾವದಿಂದಿರುವುದು. ಒಬ್ಬ ಒಳ್ಳೆ ಅಧಿಕಾರಿಯು ಪರ ಇದ್ದರೆ ಜನತೆ ಕೊನೆ ಪಕ್ಷ ಅವರನ್ನು ಇಲ್ಲಿ ಉಳಿಸಿಕೊಳ್ಳಲು ಪ್ರಯತ್ನ ಪಡಬಾರದೇ? ಈ ಅಧಿಕಾರಿಯ ಒಂದು ವಿಶೇಷ ಗುಣವೆಂದರೆ, ಒಬ್ಬ ಕೂಲಿಕಾರನೇ ಠಾಣೆಗೆ ಹೋದರೂ ಆತನ ಕಷ್ಟಗಳನ್ನು ಕೇಳುವ ಸಹೃದಯಿ. ಮನುಷ್ಯತ್ವಕ್ಕೆ ಬೆಲೆ ಕೊಡುವ ಅಪರೂಪದ ಠಾಣಾಧಿಕಾರಿ.

ನ.ರಾ.ಪುರದ ತಾಲ್ಲೂಕಿನ ಜನತೆ ತಮ್ಮ ಒಳಿತಿಗಾದರೂ ಈ ಠಾಣಾಧಿಕಾರಿಯನ್ನು ಉಳಿಸಿಕೊಳ್ಳಲು ಶತಾಯ ಗತಾಯ ಹೋರಾಡಬೇಕು. ಇದಿಲ್ಲದೇ ಹೋದಲ್ಲಿ ತಮ್ಮ ಭಾಗ್ಯದ ಗೋರಿಯನ್ನು ತಾವೇ ಈ ಮುಖಂಡರೆನ್ನಿಸಿಕೊಂಡವರಿಂದ ತೋಡಿಸಿಕೊಳ್ಳಬೇಕಾದೀತು. ೨-೩ ಜನ ಸೇರಿದಾಗ ತಮ್ಮ ತಮ್ಮಲ್ಲೇ ಸೇರಿ ಪಿಸು ಮಾತಿನ ಔದಾರ್ಯ ಬಿಟ್ಟು ಒಳ್ಳೆಯತನದೊಂದಿಗೆ ನಮಗೆ ಗಟ್ಟಿತನವೂ ಇದೆ ಎಂದು ತೋರಿಸಬೇಕು. ಇಲ್ಲವಾದಲ್ಲಿ ಬಂದದ್ದನ್ನು ಅನುಭವಿಸುತ್ತಿರಬೇಕಾದೀತು.

"ವಿವಾಲೀಕ್" ನ.ರಾ. ಪುರ

ಗಣಪತಿಯ ಅವನತಿ

(೨ನೇ ಪುಟದಿಂದ)

ಗಣೇಶನ ಮಂಟಪಗಳೆಲ್ಲವೂ ದೇಶಭಕ್ತರಿಂದ ತುಂಬಿರುತ್ತಿದ್ದವು. ಪೋಲೀಸರ ಕಾಟವಿಲ್ಲ; ಬ್ರಿಟಿಷರ ಅಂಕೆ ಇಲ್ಲ; ಧೈರ್ಯವಾಗಿ ದೇಶಭಕ್ತರು ಗಣೇಶನ ರಕ್ಷಣೆಯಲ್ಲಿ ತಮ್ಮ ಕಾರ್ಯತಂತ್ರವನ್ನು ರೂಪಿಸುತ್ತಿದ್ದರು, ಚರ್ಚೆಗಳಲ್ಲಿ ತೊಡಗುತ್ತಿದ್ದರು. ಅಲ್ಲಿ ಜಾತಿ ಮತ ಭೇದವಿರಲಿಲ್ಲ. ಗಣಪತಿ ಎಲ್ಲಾ ದೇಶಭಕ್ತರ ಆಶ್ರಯವಾಗಿದ್ದ. ಇದೇ ಸಂದರ್ಭದಲ್ಲಿ, ಯಾವುದೇ ದೇವರನ್ನು ಮುಂದಿಟ್ಟುಕೊಳ್ಳದೆ ಚಳುವಳಿ ಮಾಡ ಹೊರಟ ಪಂಜಾಬಿಗಳು "ಜಲಿಯನ್ ವಾಲಾಬಾಗ್"ನರ ಹತ್ಯೆಯನ್ನು ಅನುಭವಿಸಬೇಕಾದ ಹಿನ್ನಲೆಯಲ್ಲಿ ನೋಡಿದಾಗ, ತಿಲಕರು ಸಾರ್ವಜನಿಕ ಜೀವನಕ್ಕೆ ತಂದ ಗಣಪತಿ ಮಾಡಿದ ದೇಶಸೇವೆ ಗಮನಾರ್ಹ.

ಮಹಾರಾಷ್ಟ್ರದ ಎಲ್ಲ ನಗರಗಳಲ್ಲೂ ಗಣೇಶೋತ್ಸವ ಕಾರ್ಯಕ್ರಮಗಳು ಆರಂಭವಾಗಿ ದೇಶಪ್ರೇಮದ ಕಿಚ್ಚನ್ನು ಹೊತ್ತಿಸಿ, ಜನರನ್ನು ರಾಷ್ಟ್ರೀಯ ಹೋರಾಟಕ್ಕೆ ಅಣಿಗೊಳಿಸಿದ ಕೀರ್ತಿ ಸ್ವಾತಂತ್ರ್ಯಪೂರ್ವದ ಗಣಪತಿಗೆ ಸಲ್ಲುತ್ತದೆ. ಈರೀತಿ, ರಾಷ್ಟ್ರೀಯ ಚಳುವಳಿಯ ಹಿನ್ನೆಲೆಯಲ್ಲಿ ಗಣೇಶ ಸಾರ್ವಜನಿಕ ಗಣೇಶನಾದ.

೧೯೪೭ರಲ್ಲಿ ಸ್ವಾತಂತ್ರ್ಯ ಬರುವುದರೊಂದಿಗೆ ಗಣೇಶೋತ್ಸವದ ಉದ್ದೇಶಿತ ಗುರಿ ಸಾಧಿಸಿದಂತಾಯಿತು. ಸ್ವಾತಂತ್ರ್ಯಾ ನಂತರ ಬಂದ ಹೊಸಪೀಳಿಗೆ ಗಣೇಶನನ್ನು ಕೈಬಿಡಲಿಲ್ಲ. ಎಂದಿನಂತೆ ಗಣೇಶೋತ್ಸವ ಮುಂದುವರೆಯಿತು. ಈಗ ಸಾಂಸ್ಕೃತಿಕವಾಗಿ ಜನರನ್ನು ಎಚ್ಚರಿಸುವ ಕೆಲಸ ಗಣಪನಿಗೆ ಬಂತು. ಪರಿಣಾಮ ಸಂಗೀತ, ನಾಟಕ, ಭಜನೆ, ಚರ್ಚೆ ಹೀಗೆ ಜನರಲ್ಲಿ ಸಾಂಸ್ಕೃತಿಕ ಪರಂಪರೆಯ ಬಗ್ಗೆ ತಿಳಿಸುವ ಕಾರ್ಯ ಆರಂಭವಾಯಿತು. ಈ ಮಧ್ಯೆ ಸುಗಮ ಸಂಗೀತದ ಕಡೆಗೆ ಒಲವು ಬೆಳೆದು ಜನಸಾಮಾನ್ಯರೂ ಆನಂದಿಸಬಹುದಾದ ಭಾವಗೀತೆ, ಜನಪದಗೀತೆಗಳು ಪ್ರಚಲಿತವಾದವು.

ಆದರೆ ಸಿನೇಮಾ ಸಂಗೀತ ಇವೆಲ್ಲವನ್ನೂ ಮೂಲೆಗೊತ್ತಿ ವಿಜೃಂಭಿಸಲು ಆರಂಭವಾ[illegible]. ಇಂದಿನ ದಿನಗಳಲ್ಲಿ ಹೊಲಸು ಕ್ಯಾಬರೇ ಪ್ರದರ್ಶನದವರೆಗೆ ಬಂದಿದೆ. ಅಲ್ಲದೆ, ಕೆಲವು ಕಡೆ ಕೆಲವರಿಗೆ ಸಾರ್ವಜನಿಕರಿಂದ ಬಲವಂತವಾಗಿ ವಸೂಲಿ ಮಾಡಿ ದುಡ್ಡು ಮಾಡುವ ಮಾರ್ಗವಾಗಿಯೂ ಪರಿಣಮಿಸಿದೆ. ಈ ಪತಾಣ ಪ್ರವೃತ್ತಿ ದೊಡ್ಡ ದೊಡ್ಡ ಊರುಗಳಲ್ಲಿ ಕ್ಯಾನ್ಸರಿನಂತೆ ಹಬ್ಬಿ ಈಗ ಸಣ್ಣ ಊರುಗಳಿಗೂ ನುಗ್ಗುತ್ತಿದೆಯೆನ್ನಬಹುದು.

ಹೀಗೆ ಒಂದು ಜನಾಂಗದ ಸ್ವಾತಂತ್ರ್ಯ ಹೋರಾಟದ ಅಂಗವಾಗಿ ಬೆಳೆದ ಸಾರ್ವಜನಿಕ ಗಣಪತಿ ಈ ಮಟ್ಟಕ್ಕೆ ಮುಟ್ಟಿರುವುದು ನಮ್ಮ ದೇಶದ ದುರದೃಷ್ಟವೆನ್ನೋಣ. ಸ್ವತಃ ಗಣೇಶನ ಅವಸಾನವೂ ಆಗಿದೆಯೆನ್ನಬಹುದು. ಬರಲಿರುವ ವರ್ಷಗಳಲ್ಲಿ ಗಣೇಶ ಇನ್ನೇನು ಭೀಕರ ಸ್ಥಿತಿಗಳನ್ನು ದುರಿಸಬೇಕೋ ಆವ[illegible] ಬಲ್ಲ!!

ಕಲ್ಲು ಕಟ್ಟಿ..... (೨ನೇ ಪುಟದಿಂದ)

ಮುಂದೆಳೆಯುವುದು ಚಾಲ್ತಿಯಲ್ಲಿರುವ "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ"ಯ ಮೂಲಕ ನಿರ್ವಹಿಸಬಹುದಾಗಿದ್ದು, ಇದರ ನಿರ್ಮಾಣಕ್ಕೆ ಹೆಚ್ಚು ಹಣವೂ ದುಬಾರಿ ತಗಲುವುದಿಲ್ಲ. ಇದರ ನಿರ್ಮಾಣದಿಂದ ಬಹಳಷ್ಟು ರೈತರಿಗೆ ಅನುಕೂಲವಾದ ಹಾಗೂ

(೪ನೇ ಪುಟಕ್ಕೆ)

ಮೈಸೂರು ವಿ. ವಿ. ಮಲತಾಯಿ ಧೋರಣೆ ವಿರುದ್ಧ
ಬಿ. ಆರ್. ಪ್ರಾಜೆಕ್ಟ್ ವಿದ್ಯಾರ್ಥಿ ಸಂಪು

ಶಿವಮೊಗ್ಗ ಜಿಲ್ಲೆಯ ಬಿ. ಆರ್. ಪ್ರಾಜೆಕ್ಟ್‌ನಲ್ಲಿ ಮೈಸೂರು ವಿಶ್ವವಿದ್ಯಾಲಯದ ಶಾಖೆಯಾಗಿ ಒಂದು ಸ್ನಾತಕೋತ್ತರ ಕೇಂದ್ರ ಪ್ರಾರಂಭವಾಗಿ ವರ್ಷಗಳೇ ಸಂದರೂ ಅಲ್ಲಿನ ಸೌಕರ್ಯಗಳ ಬಗ್ಗೆ ವಿ. ವಿ. ನಿಸ್ಸೀಮ ನಿರ್ಲಕ್ಷ್ಯ ಮತ್ತು ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆಯೆಂಬ ದೂರು ಪದೇ ಪದೇ ಕೇಳಿಬರುತ್ತಿದೆ. ಅಲ್ಲಿನ ವಿದ್ಯಾರ್ಥಿಗಳ ಬೇಡಿಕೆಗಳ ಪಟ್ಟಿಯೂ ವರ್ಷ-ವರ್ಷಕ್ಕೆ ಬೆಳೆಯುತ್ತಿದೆ. ಅದರಲ್ಲಿರುವ ಯಾವ 'ಐಟಂ'ಗಳೂ ಕಡಿಮೆಯಾಗುವ ಲಕ್ಷಣಗಳು ಕಾಣುತ್ತಿಲ್ಲ.

ಸೆ. ೧೩ ರಂದು ವಿದ್ಯಾರ್ಥಿಗಳು ೩೦ ಬೇಡಿಕೆಗಳನ್ನಿಟ್ಟು ಚಳುವಳಿ ಪ್ರಾರಂಭಿಸಿದ್ದಾರೆ. ವಿದ್ಯಾರ್ಥಿ ಕ್ರಿಯಾ ಸಮಿತಿಯ ಅಧ್ಯಕ್ಷ ಎಸ್. ವಿ. ದಯಾನಂದ್ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತಾಡುತ್ತಾ, ಶಾಂತಿಯುತವಾದ ಮಾರ್ಗಗಳಿಂದ ಬೇಡಿಕೆ ಈಡೇರದಿದ್ದರೆ ಹಿಂಸಾತ್ಮಕವಾದ ಉಗ್ರ ಹೋರಾಟ ನಡೆಯುವ ಎಚ್ಚರಿಕೆಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದಾರೆ.

ಕ್ರಿಯಾಸಮಿತಿ ಉಪಾಧ್ಯಕ್ಷೆ ಕು|| ಜಯಂತಿ ವಿದ್ಯಾರ್ಥಿಗಳ ಸಹಕಾರ ಕೋರುತ್ತಾ ಚಳುವಳಿ ತೀವ್ರವಾಗುವುದೆಂದರು. ಕಾರ್ಯದರ್ಶಿ ಮನೋಹರ ಕುಮಾರ್, ಸಹಕಾರ್ಯದರ್ಶಿ ಶ್ರೀಧರರಾವ್ ಆಡಳಿತ ಧೋರಣೆ ಖಂಡಿಸಿ, ಬೇಡಿಕೆ ಈಡೇರದಿದ್ದರೆ ಮುಂದಾಗುವ ಎಲ್ಲ ಅಹಿತಕರ ಘಟನೆಗಳಿಗೆ ವಿಶ್ವವಿದ್ಯಾನಿಲಯವೇ ಹೊಣೆಯೆಂದರು.

ತರುಣ ರೈತ ಸಂಘದ ವಾರ್ಷಿಕ ಮಹಾಸಭೆ

ಗುಡ್ಡೇತೋಟ ಪಂಚಾಯ್ತಿ ವ್ಯಾಪ್ತಿಯ ಶ್ರೀಗಣೇಶ ತರುಣ ರೈತಸಂಘದ ವಾರ್ಷಿಕ ಮಹಾಸಭೆ ಸೆ. ೧೨ ರಂದು ಮಾಜಿ ತಾಲ್ಲೂಕು ಬೋರ್ಡ್ ಉಪಾಧ್ಯಕ್ಷ ಜಿ. ಸುಬ್ಬರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಅಧ್ಯಕ್ಷ ಜಿ. ವಿ. ರಘುಪತಿ ಸ್ವಾಗತಿಸಿದರು.

೧೯೮೨-೮೩ನೇ ಸಾಲಿಗೆ ನೂತನ ಕಾರ್ಯಕಾರಿ ಮಂಡಲಿಗೆ ಬಿ. ಆರ್. ವೆಂಕಟೇಶ್ ಅಧ್ಯಕ್ಷರಾಗಿ, ಎಮ್. ಎಸ್. ಅಬ್ದುಲ್ ಖಾದರ್ ಉಪಾಧ್ಯಕ್ಷರಾಗಿ, ಜಿ. ಎಸ್. ಅನಂತರಾವ್ ಕಾರ್ಯದರ್ಶಿಯಾಗಿ, ಎನ್. ವಿ. ಗಂಗಾಧರ ಸಹಕಾರ್ಯದರ್ಶಿಯಾಗಿ, ಫ್ರಾನ್ಸಿಸ್ ಡಯಾಸ್ ಕೋಶಾಧಿಕಾರಿಯಾಗಿ ಹಾಗೂ ಇತರ ೮ ಮಂದಿ ಸದಸ್ಯರಾಗಿ ಆಯ್ಕೆಯಾದರು. ಜಿ. ಅನಂತರಾವ್ ವಂದಿಸಿದರು.

'ಮನುಜಮತ' ದಿನಪತ್ರಿಕೆ ಆರಂಭ

ನ.ರಾ. ಪುರ: ಇಲ್ಲಿಂದ 'ಮನುಜಮತ' ಎಂಬ ದಿನಪತ್ರಿಕೆ ಪ್ರಕಟಣೆ ಪ್ರಾರಂಭಿಸಿದೆ. ಸೆ. ೧೧ ರಂದು ಪೋಲೀಸ್ ಠಾಣಾಧಿಕಾರಿ ಆರ್. ಲಕ್ಷ್ಮಣ್ ಅಧ್ಯಕ್ಷತೆಯಲ್ಲಿ ಡಿ. ಎಸ್. ವಿಶ್ವನಾಥಶೆಟ್ಟಿ ಉದ್ಘಾಟಿಸಿದರು. 'ಶಿರೋ ರತ್ನ'ದ ಎಸ್. ಜಿ.ಕೃಷ್ಣಮೂರ್ತಿ ಮುಖ್ಯ ಅತಿಥಿಗಳಾಗಿದ್ದರು. ಪತ್ರಿಕೆಯ ಸಂಪಾದಕರು ಎನ್. ಎಂ. ಅನಂತಮೂರ್ತಿ.

ಕಲ್ಲು ಕಟ್ಟೆ....

(೧ನೇ ಪುಟದಿಂದ)

ಶಾಶ್ವತವಾದ ಪರಿಹಾರ ಒದಗುವುದಲ್ಲದೆ, ಒಂದು ವರದಾನವಾಗಬಹುದು.

ಆದ್ದರಿಂದ ಈ ಬಡರೈತರ ಸಮಸ್ಯೆಗಳ ಬಗ್ಗೆ ಶೃಂಗೇರಿ ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ತೀವ್ರವಾಗಿ ಆಲೋಚಿಸಿ, ನಮ್ಮ ಗ್ರಾಮಸ್ಥರ ಮನವಿಯನ್ನು ಪುರಸ್ಕರಿಸಿ ಶೀಘ್ರದಲ್ಲಿಯೇ ಹಳ್ಳದ ನೆರೆ ಹಾವಳಿಯನ್ನು ತಡೆಯಲು ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಲಿ.

–ಸುಂಕದಮಕ್ಕಿ ಗ್ರಾಮಸ್ಥರು.

'ಗಣಪಾಷ್ಟಕ' : ವಿವರಣೆ

ದಿ. ೫-೮-೮೨ ರ ನಮ್ಮ ಪತ್ರಿಕೆಯಲ್ಲಿ 'ಗಣಪಾಷ್ಟಕ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದ್ದ 'ನಕ್ಷತ್ರಿಕ'ರ ಎರಡು ಚುಟುಕಗಳ ಬಗ್ಗೆ 'ನಕ್ಷತ್ರಿಕ'ರು ಹೀಗೆ ತಿಳಿಸಿದ್ದಾರೆ–

"ಈ ಪದ್ಯಗಳನ್ನು ನಿರ್ದಿಷ್ಟವಾಗಿ ಯಾರನ್ನೂ ಕುರಿತು ಬರೆದದ್ದಲ್ಲ. ಗಣಪತಿ ಉತ್ಸವದ ಸಂದರ್ಭದಲ್ಲಿ ಆರ್ಕೆಸ್ಟ್ರಾ ಮುಂತಾದ ಅಗ್ಗದ ಮನರಂಜನೆಯನ್ನು ಏರ್ಪಡಿಸುವುದನ್ನು ನಾನು ಒಪ್ಪುವುದಿಲ್ಲ. ಗಣಪತಿ ಉತ್ಸವಕ್ಕೆ ಒಂದು ವೈಶಿಷ್ಟ್ಯವಿದೆ, ಗಾಂಭೀರ್ಯವಿದೆ. ಇದನ್ನು ಮೀರುವ ಎಲ್ಲ ಬಳಗಗಳನ್ನೂ ಕುರಿತು ಬರೆದದ್ದು. ಅದರಲ್ಲಿ ಬರುವ 'ಬಳಗದಾ ಗೆಳೆಯರೇ' ಎಂಬುದು ಆಕಸ್ಮಿಕ"

ಆದ್ದರಿಂದ ಅದು "ಗೆಳೆಯರ ಬಳಗ" ದವರನ್ನು ಕುರಿತು ಬರೆದದ್ದೆಂಬ ಅಭಿಪ್ರಾಯ ಸರಿಯಲ್ಲವೆಂದು ಸ್ಪಷ್ಟಪಡಿಸುತ್ತೇವೆ.

—ಸಂಪಾದಕ.

ಯುವಜನರಿಗೆ ಕರೆ

ಸಿದ್ಧರಮಠ: ಇಲ್ಲಿನ ಸಿದ್ಧೇಶ್ವರ ಯುವಕ ರೈತ ಸಂಘ ಮತ್ತು ದುರ್ಗಾಪರಮೇಶ್ವರಿ ಮಹಿಳಾ ಸಮಾಜಗಳ ಸದಸ್ಯರು ಮಾಧ್ಯಮಿಕ ಶಾಲೆಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ಮಂಜೂರಾಗಿರುವ ಆಟದ ಮೈದಾನದ ಕೆಲಸಕ್ಕಾಗಿ ಸೆ. ೧೫ ಮತ್ತು ೧೬ ರಂದು ಶ್ರಮದಾನ ಮಾಡಿದರು. ಆ ದಿನದ ಕೂಲಿ ಆಯಾ ಸಂಘಗಳಿಗೆ ಸೇರುತ್ತದೆ. ಇದೇ ರೀತಿ ಅವರು ಗ್ರಾಮ ಪಂಚಾಯ್ತಿಯ ರಸ್ತೆಗಳನ್ನು ನಿರ್ಮಿಸುವ ಮತ್ತು ದುರಸ್ತು ಮಾಡುವ ಎರಡು ಸಣ್ಣ ಸಣ್ಣ ಗುತ್ತಿಗೆಗಳನ್ನು ವಹಿಸಿಕೊಂಡು ಸಂಘಕ್ಕೆ ಆದಾಯ ಮಾಡಿಕೊಂಡಿದ್ದಾರೆ.

ಕೊಪ್ಪ ತಾಲ್ಲೂಕಿನ ಹಿರೇಕೊಡಿಗೆ, ತೆಂಗಿನಮನೆ, ಅರೆಹಳ್ಳ, ಹುಲಿಗರಡಿ, ಕೆಸವೆ, ಉತ್ತಮೇಶ್ವರ ಮುಂತಾದ ಕಡೆಗಳಲ್ಲಿ ಯುವಜನ ಸಂಘಗಳು ಶ್ರಮದಾನದಿಂದ ಹಲವಾರು ಕೆಲಸಗಳನ್ನು ನಿರ್ವಹಿಸುತ್ತಿವೆ.

ಕೊಪ್ಪ ತಾ|| ಯುವಜನ ಒಕ್ಕೂಟದ ಅಧ್ಯಕ್ಷ ಹೆಚ್.ಎಂ. ಶ್ರೀಧರ್, "ಶ್ರಮದಾನದಿಂದ ಎಷ್ಟೋ ಕೆಲಸಗಳನ್ನು ಬಹಳಬೇಗ ನಡೆಸಬಹುದು. ಎಲ್ಲಾ ಕಡೆಗಳಲ್ಲೂ ಯುವಜನ ಸಂಘಟಿತರಾಗಿ ಈ ಸಂಘಗಳ ಮೇಲ್ಪಂಕ್ತಿಯನ್ನು ಅನುಸರಿಸುವುದಲ್ಲದೆ, ಸಂಘಶಕ್ತಿ, ಸಹಕಾರಿ ಪ್ರಯತ್ನಗಳ ಹೊಸ ಮೇಲ್ಪಂಕ್ತಿಗಳನ್ನು ಹಾಕಲಿ" ಎಂದು ಕರೆಕೊಟ್ಟಿದ್ದಾರೆ.

ಲಯನ್ಸ್ ಕ್ಲಬ್ ಆಶ್ರಯದಲ್ಲಿ ಶಿಕ್ಷಕರ ದಿನ

ಕೊಪ್ಪ: ಸೆ. ೭ ರಂದು ಇಲ್ಲಿನ ಲಯನ್ಸ್ ಕ್ಲಬ್‌ನವರು ಶಿಕ್ಷಕರ ದಿನ ಆಚರಿಸಿ ಶಿಕ್ಷಕರಿಗೆ ತಮ್ಮ ಗೌರವವನ್ನು ಅರ್ಪಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಡಾ|| ಎಸ್. ಎಂ. ಶಾನಭಾಗ್ ವಹಿಸಿದ್ದರು. ಸಹಾಯಕ ಶಿಕ್ಷಣಾಧಿಕಾರಿ ಹೆಚ್. ಎಂ. ಮಲ್ಲಯ್ಯ ಮುಖ್ಯ ಅತಿಥಿಗಳಾಗಿದ್ದರು.

ಇದೇ ಸಂದರ್ಭದಲ್ಲಿ ಶಿಕ್ಷಕ ಡಾ|| ಎಸ್. ವಿ. ಮಲ್ಲಿಕಾರ್ಜುನ ಭಟ್ಟರನ್ನು ಗೌರವಿಸಲಾಯಿತು. ಶಿಕ್ಷಕರ ಪರವಾಗಿ ಮಾತನಾಡಿದ ಡಾ|| ಭಟ್ಟರು ಡಾಕ್ಟರೇಟ್ ಪಡೆಯುವಲ್ಲಿ ತಮ್ಮ ಸಾಧನೆಯ ಹಂತವನ್ನು ವಿವರಿಸಿದರು. ನಿವೃತ್ತರಾಗಲಿರುವ ಉಪಾಧ್ಯಾಯರಾದ ಕೆ. ಶಂಕರಭಟ್, ಜೆ. ಕೆ. ಸೂರ್ಯನಾರಾಯಣಭಟ್, ಲಕ್ಷ್ಮೀನಾರಾಯಣ, ನಾಗರಾಜ ಅಯ್ಯರ್, ಶ್ರೀಮತಿ ಮೆಟ್ರೆಸ್ ಪಿಂಟೋ ಇವರುಗಳನ್ನು ಸನ್ಮಾನಿಸಲಾಯಿತು.

ನಾಲ್ಕನೇ ದರ್ಜೆ ನೌಕರರ ಸಂಘದ ಸಭೆ

ಕೊಪ್ಪ: ಇಲ್ಲಿನ ರಾಜ್ಯ ಸರ್ಕಾರಿ ನಾಲ್ಕನೇ ದರ್ಜೆ ನೌಕರರ ಸಂಘದ ಸಭೆ ಕೇಂದ್ರ ಸಂಘದ ಅಧ್ಯಕ್ಷ ಜೆ. ರಾಂಸಿಂಗ್‌ರ ಅಧ್ಯಕ್ಷತೆಯಲ್ಲಿ ಸೆ. ೧೨ ರಂದು ನಡೆಯಿತು. ಡಿ. ಕೃಷ್ಣರಾಜ ಅರಸ್ ಸ್ವಾಗತಿಸಿ, ತಾ|| ಸಂಘದ ಅಧ್ಯಕ್ಷ ಬಿ. ಎನ್. ಚಂದ್ರಶೇಖರ್ ವಂದಿಸಿದರು.

ಅಂತರ ರಾಷ್ಟ್ರೀಯ ಸಾಕ್ಷರತಾ ದಿನಾಚರಣೆ

ಶಾನುವಳ್ಳಿ

ಅಂತರ ರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯ ಅಂಗವಾಗಿ ಸೆ. ೧೩ ರಂದು ಇಲ್ಲಿನ ಗ್ರಾಮಪಂಚಾಯ್ತಿ ವತಿಯಿಂದ ನಡೆದ ಸಭೆಯ ಅಧ್ಯಕ್ಷತೆಯನ್ನು ಹೆಚ್. ಎಸ್. ಕ್ಷೇತ್ರಪಾಲ ವಹಿಸಿದ್ದರು. ಪಂ. ಸದಸ್ಯ ಎಸ್. ಆರ್. ಚಿನ್ನಯ್ಯ ಗೌಡರು ಸಮಾರಂಭವನ್ನು ಉದ್ಘಾಟಿಸಿದರು. ಬಾಲಚಂದ್ರ ರಾವ್ ಮುಖ್ಯ ಅತಿಥಿಗಳಾಗಿದ್ದರು. ಎಲ್ಲಾ ಅವಿದ್ಯಾವಂತರೂ ರಾತ್ರಿ ಶಾಲೆಗೆ ಸೇರಿ ವಿದ್ಯಾವಂತರಾಗಲು ಅಧ್ಯಕ್ಷರೂ ಅತಿಥಿಗಳೂ ಕರೆಕೊಟ್ಟರು. ಅಧ್ಯಾಪಕ ಹೆಚ್. ಎಂ. ಶಿವಪ್ಪ ಸ್ವಾಗತಿಸಿ, ವಂದಿಸಿದರು.

ಬಿಲಗದ್ದೆ

ಸೆ. ೧೩ ರಂದು ಟಿ.ಸಿ. ಕಳಸಪ್ಪಗೌಡರ ಅಧ್ಯಕ್ಷತೆಯಲ್ಲಿ ಬಿಲಗದ್ದೆ ಶಾಲಾ ಉಪಾಧ್ಯಾಯ ಗೋವಿಂದರಾವ್ ವಯಸ್ಕರ ಶಿಕ್ಷಣವನ್ನು ಉದ್ಘಾಟಿಸಿದರು. ಬಿ. ಗೋಪಾಲ ಭಟ್ ಮುಖ್ಯ ಅತಿಥಿಗಳಾಗಿದ್ದರು. ಅವಿದ್ಯಾವಂತರು ವಿದ್ಯಾವಂತರಾಗಿ ಗ್ರಾಮದ ಏಳ್ಗೆಗಟ್ಟು ಬೆಳೆಸಬೇಕೆಂದು ಅಧ್ಯಕ್ಷರೂ ಅತಿಥಿಗಳೂ ಅಭಿಪ್ರಾಯಪಟ್ಟರು. ರಾತ್ರಿ ಶಾಲಾ ಉಪಾಧ್ಯಾಯ ಬಿ. ಎಸ್. ಕೃಷ್ಣಮೂರ್ತಿ ವಂದಿಸಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.

ಚಾವಲ್ಮನೆ ಗ್ರಾಮ ಪಂಚಾಯ್ತಿ

ಕಮ್ಮರಡಿ, ಕೊಪ್ಪ ತಾ||

ಬಹಿರಂಗ ಹರಾಜು ಪ್ರಕಟಣೆ

ಚಾವಲ್ಮನೆ ಗ್ರಾಮ ಪಂಚಾಯ್ತಿಯ ಅಧೀನದಲ್ಲಿರುವ ಗಾಳಿ ಮರಗಳನ್ನು ದಿ. 29–9–82 ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಬಹಿರಂಗ ಛಡ ಸವಾಲಿನಲ್ಲಿ ಹರಾಜು ಮಾಡಲಾಗುತ್ತೆ. ಆಸಕ್ತಿಯುಳ್ಳವರು ಹರಾಜಿನ ನಿಯಮಗಳಿಗೆ ಒಳಪಟ್ಟು ಭಾಗವಹಿಸಬಹುದು.

ನಿಬಂಧನೆಗಳು:

1 ಛಡ ಸವಾಲಿನಲ್ಲಿ ಭಾಗವಹಿಸುವವರು 200 ರೂ. ಠೇವಣಿ ಕಟ್ಟಬೇಕು;
2 ಮರಗಳ ಕಡಿತಲೆ ಆಗುವ ಮೊದಲು ಸವಾಲಿನ ಪೂರ್ತಿ ಹಣ ಪಾವತಿಮಾಡಿರಬೇಕು;
3 ಸವಾಲನ್ನು ರದ್ದುಪಡಿಸುವ ಅಥವಾ ಊರ್ಜಿತಪಡಿಸುವ ಹಕ್ಕು ಪಂಚಾಯ್ತಿಗಿರುತ್ತೆ.

ಇತರ ನಿಬಂಧನೆಗಳು ಮತ್ತಿತರ ವಿವರಗಳನ್ನು ಪಂಚಾಯ್ತಿ ಕಚೇರಿಯಲ್ಲಿ ಪಡೆಯಬಹುದು.

ಅಧ್ಯಕ್ಷರು ಮತ್ತು ಸದಸ್ಯರು,
ಚಾವಲ್ಮನೆ ಗ್ರಾಮ ಪಂಚಾಯ್ತಿ,
ಕಮ್ಮರಡಿ.